**ಓ.ಎಸ್. ನಂಬರಃ 122/2021**

**ಪಿ. ಡಬ್ಲ್ಯೂಃ 1**

(ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 04-06-2025)

**ಮುಂದುವರಿದ ಪಾಟೀ ಸವಾಲು : 3ಎ ಮತ್ತು 3ಬಿ ಪ್ರತಿವಾದಿಗಳ ಪರ ಶ್ರೀ ಜೆ.ಡಿ.ಬಿ. ವಕೀಲರಿಂದ,**

1. ನನ್ನ ತಂದೆ ಮಾವಳ್ಳಿ-1 ಗ್ರಾಮದ ಸರ್ವೆ ನಂಬರ 615 ರಲ್ಲಿರುವ 2 ಗುಂಟೆ 8 ಆಣೆ ಜಾಗದಲ್ಲಿ ಮನೆ ಕಟ್ಟಿರುತ್ತಾರೆ. ಸದ್ರಿ ಮನೆ ಇರುವ ಸ್ಥಳ ನನ್ನ ತಂದೆಯ ಹೆಸರಿನಲ್ಲಿರುತ್ತದೆ. ಸದ್ರಿ ಮನೆಯಲ್ಲಿ ನನ್ನ ತಂದೆಯ ಚಿಕ್ಕಪ್ಪನವರಾದ ಮಾರಿ ಲಚ್ಮಯ್ಯ ಎಂಬುವರಿಗೆ ಯಾವುದೇ ಹಕ್ಕು ಇರುವುದಿಲ್ಲ. ಸದ್ರಿ ಜಾಗವು ನನ್ನ ತಂದೆಯವರಿಗೆ ಭೂ ನ್ಯಾಯ ಮಂಡಳಿಯಿಂದ ಮಂಜೂರಿಯಾದ ಜಾಗವಾಗಿರುತ್ತದೆ. ಸದ್ರಿ ಜಾಗ ನನ್ನ ತಂದೆಯವರಿಗೆ ಮಂಜೂರಿಯಾಗುವ ಕಾಲಕ್ಕೆ ಮಾರಿ ಲಚ್ಮಯ್ಯ ರವರು ಜೀವಂತ ಇದ್ದರೋ, ಇಲ್ಲವೋ ಎಂದು ಗೊತ್ತಿಲ್ಲ. ಈ ಮೇಲೆ ಹೇಳಿದ ಮನೆಯ ಜಾಗವನ್ನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ. ಈ ಮೇಲೆ ಹೇಳಿದ ಮನೆ ಮಾರಿ ಲಚ್ಮಯ್ಯ ರವರ ಮನೆಯಿಂದ ಸುಮಾರು 50 ಫೂಟ್ ದೂರದಲ್ಲಿರುತ್ತದೆ. ನನ್ನ ಅಜ್ಜ ಗೋಯ್ದು ಲಚ್ಮಯ್ಯ ಮತ್ತು ಮಾರಿ ಲಚ್ಮಯ್ಯ ರವರು ಕೂಡು ಕುಟುಂಬದಲ್ಲಿ ಒಟ್ಟಾಗಿ ವಾಸ ಮಾಡುತ್ತಿದ್ದರು ಎಂದು ತೋರಿಸಲು ಯಾವುದೇ ದಾಖಲೆ ಇರುವುದಿಲ್ಲ.

2. ಈ ದಾವೆಯಲ್ಲಿ ನಾನು ಹಾಜರುಪಡಿಸಿರುವ ದಾಖಲಾತಿಗಳ ಬಗ್ಗೆ ಮಾಹಿತಿ ಇರುತ್ತದೆ. ಸಾಕ್ಷಿಗೆ ಈ ದಾವೆಯಲ್ಲಿ ಆತ ಹಾಜರುಪಡಿಸಿದ ದಾಖಲಾತಿಗಳನ್ನು ತೋರಿಸಿ, ಗೋಯ್ದು ಲಚ್ಮಯ್ಯ ಮತ್ತು ಮಾರಿ ಲಚ್ಮಯ್ಯ ರವರು ಒಟ್ಟಾಗಿ ದಾವಾ ಆಸ್ತಿಯನ್ನು ಅನುಭವಿಸುತ್ತಿದ್ದರು ಎಂದು ತೋರಿಸಲು ಯಾವ ದಾಖಲಾತಿಯನ್ನು ಹಾಜರುಪಡಿಸಿದ್ದೀರಿ ಎಂದು ಕೇಳಿದಾಗ, ಸಾಕ್ಷಿಯು ದಾಖಲಾತಿಗಳನ್ನು ನೋಡಿ ನಿಪಿ-8 ದಾಖಲಾತಿ ಎಂದು ತೋರಿಸಿರುತ್ತಾರೆ. ನಿಪಿ-8 ಮ್ಯುಟೇಶನ್ ಎಂಟ್ರಿಯಲ್ಲಿ ದಾವಾ ಆಸ್ತಿಯಲ್ಲಿ ತೋರಿಸಿದ ಎಲ್ಲಾ ಆಸ್ತಿಗಳು ಕಂಡುಬರುವುದಿಲ್ಲ ಎಂದರೆ ಸರಿ. ನಿಪಿ-8 ಸರ್ವೆ ನಂಬರ್ 463/4ಬ ಆಸ್ತಿಗೆ ಸಂಬಂಧಿಸಿದ್ದಾಗಿರುತ್ತದೆ. ದಾವಾ ಆಸ್ತಿಯಲ್ಲಿ ಸರ್ವೆ ನಂಬರ್ 463/4ಬ ಆಸ್ತಿಯನ್ನು ಹೊರತುಪಡಿಸಿ, ಉಳಿದ ದಾವಾ ಆಸ್ತಿಗಳನ್ನು ನನ್ನ ಅಜ್ಜ ಗೋಯ್ದು ಲಚ್ಮಯ್ಯ ಮತ್ತು ಮಾರಿ ಲಚ್ಮಯ್ಯ ರವರು ಒಟ್ಟಾಗಿ ಅನುಭವಿಸುತ್ತಿದ್ದರು ಎಂದು ತೋರಿಸಲು ದಾಖಲಾತಿ ಇರುವುದಿಲ್ಲ ಎಂದರೆ ಸರಿ. ನನ್ನ ಅಜ್ಜನಿಗೆ ಗೋಯ್ದು ಲಚ್ಮಯ್ಯ ಮತ್ತು ಗೋವಿಂದ ಲಚ್ಮಯ್ಯ ಎಂಬ ಎರಡೂ ಹೆಸರು ಇತ್ತು ಎಂದರೆ ಸರಿ. ಬೈಲೂರು ಗ್ರಾಮದ ಮ್ಯುಟೇಶನ್ ಎಂಟ್ರಿ ಸಂಖ್ಯೆ 6009 ರ ಪ್ರಕಾರ, ಗೋಯ್ದು ಲಚ್ಮಯ್ಯ ರವರಿಗೆ ಸರ್ವೆ ನಂಬರ್ 463/4ಬ ರಲ್ಲಿರುವ ಆಸ್ತಿಯಲ್ಲಿರುವ ರೈತ ಹಕ್ಕನ್ನು ಕಡಿಮೆ ಮಾಡಲಾಗಿದೆ ಎಂದರೆ ಸರಿ. ಈ ಮೇಲೆ ಹೇಳಿದ ಮ್ಯುಟೇಶನ್ ಎಂಟ್ರಿ ಸರಿಯಾಗಿರುತ್ತದೆ ಎಂದರೆ, ಸಾಕ್ಷಿಯು ನಾನು ಒಪ್ಪುವುದಿಲ್ಲ ಎಂದು ಉತ್ತರಿಸಿರುತ್ತಾರೆ. ಈ ಮೇಲೆ ಹೇಳಿದ ಮ್ಯುಟೇಶನ್ ಎಂಟ್ರಿಯ ಬಗ್ಗೆ ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನೆ ಮಾಡಿದ್ದೀರಾ ಎಂದರೆ, ಸಾಕ್ಷಿಯು ಆ ಬಗ್ಗೆ ನಮಗೆ ಗೊತ್ತಿರಲಿಲ್ಲ ಆದ್ದರಿಂದ ಪ್ರಶ್ನೆ ಮಾಡಿರುವುದಿಲ್ಲ ಎಂದು ಉತ್ತರಿಸಿರುತ್ತಾರೆ.

3. ಬೈಲೂರು ಗ್ರಾಮದ ಮ್ಯುಟೇಶನ್ ಎಂಟ್ರಿ ಸಂಖ್ಯೆ 6010 ರಂತೆ, ಮಾರಿ ಲಚ್ಮಯ್ಯ ರವರಿಗೆ ಸರ್ವೆ ನಂಬರ್ 463/4ಬ ರಲ್ಲಿ ಸಾಗುವಳಿ ಮಾಡುತ್ತಿದ್ದರಿಂದ, ಅವರ ರೈತ ಹಕ್ಕು ದಾಖಲಾಗಿರುತ್ತದೆ ಎಂದರೆ,

ಸಾಕ್ಷಿಯು ಇರಬಹುದು ಆದರೆ, ನಾನು ಒಪ್ಪುವುದಿಲ್ಲ ಎಂದು ಉತ್ತರಿಸಿರುತ್ತಾರೆ. ನನ್ನ ಅಜ್ಜ ಗೋವಿಂದ ಯಾನೆ ಗೋಯ್ದು ಲಚ್ಮಯ್ಯ ರವರು ಯಾವಾಗ ಮರಣ ಹೊಂದಿದರು ಎಂದು ಗೊತ್ತಿಲ್ಲ. ಈ ಮೇಲೆ ಹೇಳಿದ ಮ್ಯುಟೇಶನ್ ಎಂಟ್ರಿಗಳು ದಾಖಲಾದಾಗ, ನನ್ನ ಅಜ್ಜ ಜೀವಂತ ಇದ್ದರು ಎಂದರೆ ನನಗೆ ಗೊತ್ತಿಲ್ಲ. ನನ್ನ ಅಜ್ಜಿ 35 ವರ್ಷಗಳ ಹಿಂದೆ ಮರಣ ಹೊಂದಿರುತ್ತಾರೆ.

4. ಸಾಕ್ಷಿಗೆ ಬೈಲೂರು ಗ್ರಾಮದ ಮ್ಯುಟೇಶನ್ ಎಂಟ್ರಿ ಸಂಖ್ಯೆ 6087 ರ ಪ್ರತಿಯನ್ನು ತೋರಿಸಿ ಸರ್ವೆ ನಂಬರ್ 463/ 4ಬ ರಲ್ಲಿರುವ ಮಾರಿ ಲಚ್ಮಯ್ಯ ರವರ ರೈತಾಪಿ ಹಕ್ಕನ್ನು ಸದ್ರಿಯವರ ಹೇಳಿಕೆಯ ಮೇರೆಗೆ ಅವರ ಪತ್ನಿಯಾದ ಹಾದಿ ಕೋಂ ಮಾರಿ ಇವರ ಹೆಸರಿಗೆ ವರ್ಗಾವಣೆಯಾಗಿರುತ್ತದೆ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಗೊತ್ತಿಲ್ಲ. ಆದರೆ, ನೀವು ಈಗ ತೋರಿಸಿದ ದಾಖಲೆಯಲ್ಲಿ ಆ ರೀತಿ ಇರುತ್ತದೆ ಎಂದು ಹೇಳಿರುತ್ತಾರೆ. ಲಚ್ಮಯ್ಯ ರವರ ಮಕ್ಕಳಲ್ಲಿ ನನ್ನ ಅಜ್ಜ ಗೋವಿಂದ ಯಾನೆ ಗೋಯ್ದು ಲಚ್ಮಯ್ಯ ರವರು ಹಿರಿಯವರಾಗಿರುತ್ತಾರೆ. ನಿಪಿ–8 ರ ಪ್ರಕಾರ ಸರ್ವೆ ನಂಬರ್ 463/4ಬ ರಲ್ಲಿರುವ ಆಸ್ತಿಯು ನನ್ನ ಅಜ್ಜನ ಆಸ್ತಿ ಎಂದು ಕಂಡುಬರುವುದಿಲ್ಲ. ನಿಪಿ–8 ದಾಖಲಾಗುವ ಕಾಲಕ್ಕೆ ನನ್ನ ಅಜ್ಜನಿಗೆ ಸರ್ವೆ ನಂಬರ್ 463/4ಬ ರಲ್ಲಿ ಯಾವುದೇ ಹಕ್ಕಿರಲಿಲ್ಲ ಎಂದರೆ ಸರಿಯಲ್ಲ. ನಿಪಿ–9 ಮ್ಯುಟೇಶನ್ ಎಂಟ್ರಿಯ ಪ್ರಕಾರ, ದಾವಾ ಆಸ್ತಿಯಲ್ಲಿ ಕಾಣಿಸಿದ ಎಲ್ಲಾ ಆಸ್ತಿಗಳು ಹಾದಿ ಕೋಂ ಮಾರಿ ಇವರಿಗೆ ಸ್ವಂತ ನಾತೆಯಿಂದ ಸಾಗುವಳಿ ಮಾಡುತ್ತಿದ್ದರಿಂದ ಭೂ ನ್ಯಾಯ ಮಂಡಳಿಯು ಅವರ ಹೆಸರಿಗೆ ಮಂಜೂರಿ ಮಾಡಿದ ಆಸ್ತಿಗಳು ಎಂದರೆ ಹೌದು ಆದರೆ, ಅದನ್ನು ನಾನು ಒಪ್ಪುವುದಿಲ್ಲ. ಸದ್ರಿ ಭೂ ನ್ಯಾಯ ಮಂಡಳಿಯ ಆದೇಶವನ್ನು ನಾನು ಇಲ್ಲಿಯವರೆಗೆ ಪ್ರಶ್ನೆ ಮಾಡಿರುವುದಿಲ್ಲ. ನನ್ನ ತಂದೆಯವರು ಸದ್ರಿ ಆದೇಶದ ವಿರುದ್ಧ ಏನು ಮಾಡಿದ್ದಾರೆ ಎಂದು ಗೊತ್ತಿಲ್ಲ.

5. ನನ್ನ ತಂದೆಯವರು ಅವರ ರೈತಾಪಿ ಹಕ್ಕಿನ ಜಾಗಕ್ಕೆ ಸಂಬಂಧಿಸಿದಂತೆ, ಭೂ ನ್ಯಾಯ ಮಂಡಳಿಗೆ ಅರ್ಜಿ ಸಲ್ಲಿಸಿರುತ್ತಾರೆ. ಅದು ದಾವಾ ಆಸ್ತಿಯಲ್ಲಿ ಕಾಣಿಸಿದ ಆಸ್ತಿ ಆಗಿರುತ್ತದೆ. ಸದ್ರಿ ನನ್ನ ತಂದೆ ಸಲ್ಲಿಸಿದ ಅರ್ಜಿಯು ಏನಾಯಿತು ಎಂದು ನನಗೆ ಗೊತ್ತಿಲ್ಲ. ಈ ದಾವೆ ದಾಖಲಿಸುವ ಸಂದರ್ಭದಲ್ಲಿ ಸದ್ರಿ ಅರ್ಜಿಯ ಬಗ್ಗೆ ಪರಿಶೀಲಿಸಿದಾಗ, ಕಂದಾಯ ಇಲಾಖೆಯಲ್ಲಿ ಸದ್ರಿ ದಾಖಲೆ ಇರುವುದಿಲ್ಲ ಎಂದು ಹೇಳಿರುತ್ತಾರೆ. ಸದ್ರಿ ಅರ್ಜಿಯ ಪ್ರತಿ ನನ್ನ ಬಳಿ ಇರುತ್ತದೆ. ಸದ್ರಿ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಸದ್ರಿ ಅರ್ಜಿಯಲ್ಲಿ ನನ್ನ ತಂದೆ ದಾವಾ ಆಸ್ತಿಗಳು ಕುಟುಂಬದ ಆಸ್ತಿ ಎಂದು ಕಾಣಿಸಿರುತ್ತಾರೆ. ಸದ್ರಿ ಅರ್ಜಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದರೆ, ಸತ್ಯಾಂಶ ಗೊತ್ತಾಗುತ್ತದೆ ಎಂಬ ಕಾರಣಕ್ಕೆ ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನನಗೆ ದಾವಾ ಆಸ್ತಿಗಳಲ್ಲಿ ಹಕ್ಕು ಇದೆ ಎಂಬ ವಿಚಾರವು 2021 ನೇ ಇಸ್ವಿಯಲ್ಲಿ ನನ್ನ ಅಣ್ಣನಿಂದ ತಿಳಿದುಬಂತು. ಅಲ್ಲಿಯವರೆಗೆ ದಾವಾ ಆಸ್ತಿಗಳ ಬಗ್ಗೆ ಯಾವ ಮಾಹಿತಿಯು ನನಗೆ ಇರಲಿಲ್ಲ. ದಾವಾ ಆಸ್ತಿಗಳ ಬಗ್ಗೆ ನನಗೆ 2021 ನೇ ಇಸ್ವಿಯಲ್ಲಿ ಗೊತ್ತಾಗುವವರೆಗೆ ದಾವಾ ಆಸ್ತಿಯನ್ನು ಹಾದಿ ಕೋಂ ಮಾರಿ ಇವರ ವಾರಸುದಾರರಾದ 3 ನೇ ಪ್ರತಿವಾದಿಗಳು ಕಬ್ಜಾ ವಹಿವಾಟು ಮಾಡಿಕೊಂಡು ಬರುತ್ತಿದ್ದರು ಎಂದರೆ ಹೌದು. ಈಗಲೂ 3 ನೇ ಪ್ರತಿವಾದಿಗಳು ದಾವಾ ಆಸ್ತಿಗಳಲ್ಲಿ ಸಾಗುವಳಿ ಮಾಡಿಕೊಂಡು ಬರುತ್ತಿದ್ದಾರೆ ಎಂದರೆ, ಸಾಕ್ಷಿಯು ಖಾಲಿ ಬಿಟ್ಟಿರುತ್ತಾರೆ ಎಂದು ಹೇಳಿರುತ್ತಾರೆ. ದಾವಾ ಆಸ್ತಿಯ ವಿಷಯವಾಗಿ

ನನ್ನ ತಂದೆ ಮತ್ತು ಹಾದಿ ಕೋಂ ಮಾರಿ ಇವರ ನಡುವೆ ತಕರಾರು ಇತ್ತು. ಹಾಗೆ ಸದ್ರಿಯವರು ಒಬ್ಬರ ಮನೆಗೆ ಇನ್ನೊಬ್ಬರು ಹೋಗುತ್ತಿರಲಿಲ್ಲ.

**ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಪ್ರತಿವಾದಿ ಪರ ವಕೀಲರು ಸಮಯಾವಕಾಶ ಕೇಳಿದ್ದರಿಂದ ಮುಂದೂಡಲಾಯಿತು.**

**(ನನ್ನ ಹೇಳಿಕೆ ಪ್ರಕಾರ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ. ಹೇ.ಕೇ. ಸರಿ ಇದೆ**

**ಹೆಚ್ಚುವರಿ ಸಿವಿಲ್ ಜಡ್ಜ್, ಭಟ್ಕಳ.**